**ಓ ಎಸ್ 9/2021 ಪಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 05.07.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

ಸರ್ವೆ ನಂ 72/1 ರಲ್ಲಿನ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿದೆ ಎಂದು ತಪ್ಪಾಗಿ ನಮೂದು ಆಗಿದೆ ಎಂದರೆ ಈಗ 2 ವರ್ಷಗಳ ಹಿಂದೆ ನಮಗೆ ಗೊತ್ತಾಯಿತು. ತಪ್ಪಾಗಿ ನಮೂದು ಆಗಿದೆ ಎಂಬ ಬಗ್ಗೆ ದಾಖಲೆಯನ್ನು ನಾವು ನೋಡಿಲ್ಲ. ತಪ್ಪಾಗಿ ನಮೂದು ಆಗಿದೆ ಎಂದು ತಿಳಿದ ಬಂದ ನಂತರ ಭೂ ಸ್ವಾಧೀನ ನಡಾವಳಿಯನ್ನು ಪ್ರಶ್ನೆ ಮಾಡಿದ್ದೇವೆ. 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಹಾಗೆ ಪ್ರಶ್ನೆ ಮಾಡಿದ್ದೆವು. ಆ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದೇವೆ. ಭೂಸ್ವಾಧೀನ ಆಗಿದೆ ಎಂದು ಆರ್ ಟಿ ಸಿ ಯಲ್ಲಿ ನಮೂದು ಆಗಿದೆ. ಭೂಸ್ವಾಧೀನ ನಡಾವಳಿಗಳನ್ನು ಯಾವುದೇ ನ್ಯಾಯಾಲಯದಲ್ಲಿ ನಾವು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಅಜ್ಜಪಾಲಿನ 0.32 ಗುಂಟೆಗೆ ಸಂಬಂಧಿಸಿದ ಆಸ್ತಿಗಳಲ್ಲಿ ಭೂಸ್ವಾಧೀನ ಆಗಿರುವ ಬಗ್ಗೆ ನಮೂದು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ದೊಡ್ಡಪ್ಪ ಸಿ ಕೆ ದೇವೇಗೌಡರ ಹೆಸರಿನಲ್ಲಿರುವ ಸರ್ವೆ ನಂ. 72/1 ರ ಆರ್ ಟಿ ಸಿ ಯನ್ನು ಈಗ 3 ವರ್ಷಗಳ ಹಿಂದೆ ನೋಡಿದ್ದೇನೆ. ಸದರಿ ಆರ್ ಟಿ ಸಿ ಯಲ್ಲಿ ಭೂಸ್ವಾಧೀನದ ಬಗ್ಗೆ ನಮೂದು ಆಗಿಲ್ಲ. ಸಿ ಕೆ ದೇವೇಗೌಡರ ಹೆಸರಿನಲ್ಲಿರುವ ಆರ್ ಟಿ ಸಿ ಯಲ್ಲಿ ಭೂಸ್ವಾಧೀನದ ಬಗ್ಗೆ ನಮೂದು ಆಗಿ ಈಗ ಅದು ಮುನಿಸಿಪಾಲಿಟಿ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅದು ತಪ್ಪಾಗಿ ನಮೂದು ಆಗಿರುವ ಕಾರಣದಿಂದಲೇ ಹೋರಾಟ ಮಾಡುತ್ತಿರುವುದಾಗಿ ಹೇಳುತ್ತಾರೆ. ನಮ್ಮ ಅಜ್ಜಿಯ ಅಜ್ಜಪಾಲಿನಲ್ಲಿ ಸರ್ವೆ ನಂ.

72/1 ಎ ರಲ್ಲಿ ಭೂಸ್ವಾಧೀನ ಆಗಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 72/1 ಎ ಗೆ ಸಂಬಂಧಿಸಿದ ಆರ್ ಟಿ ಸಿ ಈಗಲೂ ಸಹ ನಮ್ಮ ದೊಡ್ಡಪ್ಪ ಸಿ ಕೆ ದೇವೇಗೌಡ, ಅವರ ಹೆಂಡತಿ ವನಜಾಕ್ಷಮ್ಮ, ನನ್ನ ತಂದೆ ವೆಂಕಟೇಶ್ ಹಾಗೂ ನನ್ನ ಚಿಕ್ಕಪ್ಪ ನಾಗರಾಜು 4 ಜನರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಆ ಜಮೀನಿನ ಖಾತೆ ಸಂಬಂಧ ಈಗಲೂ ಸಹ ಎ ಸಿ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿಯಲ್ಲ. ಎ ಸಿ ನ್ಯಾಯಾಲಯದಲ್ಲಿ ನಡೆಯುತ್ತಿರುವ ವ್ಯಾಜ್ಯ ನಡೆಯುತ್ತಿರುವ ಬಗ್ಗೆ ನನ್ನ ತಂದೆ ನನಗೆ ತಿಳಿಸಿರುತ್ತಾರೆ. ನನ್ನ ತಂದೆ ಹೇಗೆ ಸಹಿ ಮಾಡುತ್ತಾರೆ ಎಂದು ನನಗೆ ಗೊತ್ತಿದೆ. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನ ತಂದೆಯಾಗಿದೆ. ಸಾಕ್ಷಿಯು ಸಹಿಯನ್ನು ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಶಾನೆ ಡಿ 1 ಎಂದು, ಸಹಿಯನ್ನು ನಿಶಾನೆ ಡಿ 1ಎ ಎಂದು ಗುರುತಿಸಲಾಯಿತು. ಪಾಂಡವಪುರದಲ್ಲಿ ಒಂದು ಮನೆ ನಮ್ಮ ಅಜ್ಜಿ ಮತ್ತು ತಾತನಿಗೆ ಅಜ್ಜಪಾಲು ಎಂದು ಹೋಗಿತ್ತು ಎಂದರೆ ಸರಿ. ಅದು 17 ವರೆ ಅಡಿ X 26 ಅಡಿ ವಿಸ್ತೀರ್ಣದ ಮನೆ ಎಂದರೆ ಸರಿ. ನಮ್ಮ ಅಜ್ಜಿ ಮತ್ತು ತಾತನ ಕಾಲ ನಂತರ ಈ ಮನೆಯು ನಮ್ಮ ತಂದೆಗೆ ಸೇರತಕ್ಕದ್ದು ಎಂದು ದಿನಾಂಕ 17.09.1984 ರ ಪಾಲುಪಟ್ಟಿಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಆ ಪ್ರಕಾರ ನಮ್ಮ ಅಜ್ಜಿ ಮತ್ತು ತಾತ ತೀರಿಕೊಂಡ ನಂತರ ಆ ಮನೆಯನ್ನು ನಮ್ಮ ತಂದೆಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಆ ಮನೆಯನ್ನು ವಿಷಕಂಠಚಾರ್ ರವರ ಮಗ ಅನಿಲ್ ಕುಮಾರ್ ಎಂಬುವವರಿಗೆ ರೂ.1,50,000/- ಕ್ಕೆ ನಮ್ಮ ತಂದೆ ಭೋಗ್ಯ ಮಾಡಿದ್ದಾರೆ ಎಂದರೆ ನಮ್ಮ ದೊಡ್ಡಮ್ಮ ವನಜಾಕ್ಷಮ್ಮ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ನಾಗರಾಜು 3 ಜನರೂ ಸೇರಿ ಭೋಗ್ಯಕ್ಕೆ ನೀಡಿದ್ದಾರೆ. ಹಾಗೆ ಭೋಗ್ಯಕ್ಕೆ ನೀಡಿ ಸುಮಾರು 3 ವರ್ಷಗಳಾಗಿವೆ. 3 ಜನರೂ ಸೇರಿ ಭೋಗ್ಯಕ್ಕೆ ನೀಡಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಎಷ್ಟು ರೂಪಾಯಿಗೆ ಭೋಗ್ಯಕ್ಕೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಿನಾಂಕ 01.06.2023 ರಂದು ನಮ್ಮ ತಂದೆಯು ಅನಿಲ್ ಕುಮಾರ್ ರವರಿಗೆ ರೂ.1,50,000/- ಆ ಮನೆಯನ್ನು ಭೋಗ್ಯಕ್ಕೆ ಹಾಕಿದ್ದಾರೆ

ಎಂದರೆ ಸರಿಯಲ್ಲ. ಚಂದ್ರೆ ಗ್ರಾಮದ ಕರೀಗೌಡರ ಮಗ ಸಿ ಕೆ ವೆಂಕಟೇಶ ಎಂದರೆ ನನ್ನ ತಂದೆ. ನಮ್ಮ ತಂದೆ ಆ ಮನೆಯನ್ನು ಅನಿಲ್ ಕುಮಾರ್ ರವರಿಗೆ ಭೋಗ್ಯಕ್ಕೆ ಭೋಗ್ಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಭೋಗ್ಯದ ಹಣವನ್ನು ನಮ್ಮ ತಂದೆಯೇ ತೆಗೆದುಕೊಂಡಿದ್ದಾರೆ ಎಂದರೆ 3 ಜನರು ಹಂಚಿಕೊಂಡಿದ್ದಾರೆ.

ಪಂಚಾಯಿತಿ ಪಾಲುಪಟ್ಟಿ ಪ್ರಕಾರ ಆ ಮನೆಯು ಯಾರಿಗೆ ಸೇರಬೇಕೆಂದು ಬರೆಯಲಾಗಿತ್ತೋ ಆ ಪ್ರಕಾರ ಆ ಮನೆಯನ್ನು ನಮ್ಮ ತಂದೆ ತೆಗೆದುಕೊಂಡು ಅನಿಲ್ ಕುಮಾರ್ ರವರಿಗೆ ಭೋಗ್ಯಕ್ಕೆ ನೀಡಿ ಹಣ ಪಡೆದುಕೊಂಡಿರುವ ಸಂಗತಿ ನನಗೆ ಗೊತ್ತಿದ್ದರೂ ಸಹ ಅದನ್ನು ಒಪ್ಪಿಕೊಂಡರೆ ಈ ದಾವೆಗೆ ಅನಾನುಕೂಲವಾಗುತ್ತದೆ ಎಂಬ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 17.09.1984 ರಂದು ಪಾಲುಪಟ್ಟಿ ಬರೆಯುವಾಗ ಪಾಂಡವಪುರದ ಸರ್ವೆ ನಂ. 72/1 ರಲ್ಲಿನ 0.06 ಗುಂಟೆ ಜಮೀನನ್ನು ಅಜ್ಜಪಾಲು ಎಂದು ಇಟ್ಟುಕೊಂಡಿದ್ದು ನನ್ನ ಅಜ್ಜಿ ತಾತನ ಮರಣಾ ನಂತರ ಆ ಜಮೀನು ನಮ್ಮ ತಂದೆಗೆ ಸೇರತಕ್ಕದ್ದು ಎಂದು ಬರೆದಿದ್ದು ದಿನಾಂಕ 10.09.1986 ರ ಪಾಲುಪಟ್ಟಿಯಡಿ ಭಾಗ ಮಾಡಿಕೊಳ್ಳುವಾಗ ಆ ಜಮೀನನ್ನು ನಮ್ಮ ದೊಡ್ಡಪ್ಪ ಸಿ ಕೆ ದೇವೇಗೌಡರಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಆಸ್ತಿಗಳ ಭಾಗ ಆಗಿರುವ ಸಂಗತಿ ಮತ್ತು ಭೂಸ್ವಾಧೀನವಾಗಿರುವ ಸಂಗತಿ ನಮ್ಮ ತಂದೆಗೆ ಗೊತ್ತಿದ್ದು ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯ ಸಂಗತಿ ಹೊರಬರುತ್ತದೆ ಎಂಬ ಕಾರಣದಿಂದ ಅವರು ಬರದೆ ನನ್ನನ್ನು ಸಾಕ್ಷಿಯನ್ನಾಗಿ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯ ಸಂಗತಿಗಳು ನನಗೆ ಗೊತ್ತಿಲ್ಲದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ.1 ಮತ್ತು 2 ಪಾಲುಪಟ್ಟಿಗಳ ಪ್ರಕಾರ ಸಿ ಕೆ ದೇವೇಗೌಡರು ಮತ್ತು ನಾಗರಾಜುರವರ ಸ್ವಾಧೀನಾನುಭವದಲ್ಲಿದ್ದು ಅವುಗಳ ಮೇಲೆ ನಮಗೆ ಯಾವುದೇ ರೀತಿಯ ಭಾಗಾಂಶದ ಹಕ್ಕು ಮತ್ತು ಸ್ವಾಧೀನಾನುಭವ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ

ಐಟಂ ನಂ.3 ಪಂಚಾಯಿತಿ ಪಾಲುಪಟ್ಟಿ ಮುಖಾಂತರ ನಮ್ಮ ತಂದೆಯ ಸ್ವಾಧೀನಾನುಭವದಲ್ಲಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ.4 ರಲ್ಲಿನ 0.06 ಗುಂಟೆ ಜಮೀನು ಭೂಸ್ವಾಧೀನಗೊಂಡಿದ್ದು ಆ ಬಗ್ಗೆ ಸಿ ಕೆ ದೇವೇಗೌಡರು ಕೇಸು ನಡೆಸುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಕೇಸನ್ನು ಸಿ ಕೆ ವೆಂಕಟೇಶ್ ಹಾಗೂ ಸಿ ಕೆ ನಾಗರಾಜು ಸಹ ನಡೆಸುತ್ತಿದ್ದಾರೆ ಎಂದು ಹೇಳುತ್ತಾರೆ. ಈ ಎಲ್ಲಾ ಕಾರಣಗಳದದಿ ಈ ದಾವೆಯಲ್ಲಿ ನಮ್ಮ ತಂದೆ ಕೋರಿರುವ ಹಾಗೆ ನಮಗೆ ಯಾವುದೇ ಭಾಗ ಬರಬೇಕಾಗಿಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**